ಕಂದಾಯದ 300 ರಷ್ಟು ಬೆಲೆಯನ್ನು ಸ್ಟಾಂಪ್ ಡಮ್ಯಾಟಿ ಆಗಿ ತೆಗೆದುಕೊಳ್ಳಲಾಗುತ್ತಿದೆ?

ಆ) ಈ ಸದರಿ ಕಾಯಿದೆಯನ್ನು ಬದಲಾಯಿಸಿ ಸದರಿ ಜಮೀನುಗಳಿಗೂ ಸದ ಕ್ರಯದ ರೀತಿ ಅನುಸರಿಸಿ ಮಾರ್ಕೆಟ್ ಬೆಲೆಯಂತೆ ಸ್ಟ್ಯಾಂಪ್ ಡ್ಯೂಟಿ ತೆಗೆದುಕೊಳ್ಳಲು ಸರ್ಕಾರ ತೀರ್ಮಾನಿಸಿರುವುದೇ?

ಇ) ಇದರಿಂದ ಬಡ ರೈತರಿಗೆ ಹೆಚ್ಚು ಹೊರೆಯಾಗುವುದರಿಂದ ಇದನ್ನು ಮೊದಲಿನಂತೆ ಅನುಸರಿಸಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುವುದೇ?

ಈ) ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಇಲ್ಲ, ಕಂದಾಯದ 25ರಷ್ಟು ಬೆಲೆಯನ್ನು ಸ್ಟಾಂಪ್ ಡ್ಯೂಟಿಯೆಂದು ಕೃಷಿ ಭೂಮಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಲಾಗುತ್ತಿದೆ.

ಆ) ಹೌದು

ಇ) ಪರಿಶೀಲಿಸಲಾಗುವುದು

ಈ) ತೆಗೆದುಕೊಳ್ಳಲಾಗುವುದು.

ದ. ಕನ್ನಡ ಜಿಲ್ಲೆಯಲ್ಲಿರುವ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳ ಸಂಖ್ಯೆ

3539 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟೆ ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇರುತ್ತದೆ?

ಆ) ಕಾಪು ಕ್ಷೇತ್ರದಲ್ಲಿ 36 ಕಂದಾಯ ಗ್ರಾಮಗಳಿದ್ದು ಎಷ್ಟು ಗ್ರಾಮಗಳಲ್ಲಿ ಆ ಹುದ್ದೆಗಳು ಖಾಲಿ ಇರುತ್ತವೆ?

ಇ) ಅವುಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಟ್ಟು 144 ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇವೆ.

ಆ) ಏಳು ಗ್ರಾಮಗಳಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇರುತ್ತವೆ.

ಇ) ಮಿತವೇತನ ಪದವೀಧರರನ್ನು ಹಾಗೂ ವಿವಿಧ ಇಲಾಖೆಗಳಲ್ಲಿನ ದಿನಗೂಲಿ ನೌಕರರನ್ನು ವರ್ಗವಣಿಯಿಂದ ಭರ್ತಿ ಮಾಡಿಕೊಳ್ಳುವ ಮೂಲಕ ಈ ಖಾಲಿ ಹುದ್ದೆಗಳನ್ನು ತುಂಬುಲು ಈಗ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕಾಪುವಿನಲ್ಲಿ ಗ್ರಾಮ ಸಹಾಯಕರುಗಳ ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ

3538 - ಶ್ರೀ ವಸಂತ ವಿ ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕಾಪುವಿನಲ್ಲಿ ಗ್ರಾಮ ಸಹಾಯಕರುಗಳ ಎಷ್ಟು ಹುದ್ದೆಗಳು ಖಾಲಿ ಇವೆ?

ಆ) ಅವರುಗಳ ಆಯ್ಕೆಯಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಸರ್ಕಾರ ಏಕೆ ಅವಕಾಶ ನೀಡುವುದಿಲ್ಲ?